**ಓ.ಎಸ್. ನಂಃ 560/2023**

**ಪಿ.ಡಬ್ಲ್ಯೂಃ 1**

**ದಿನಾಂಕ 30.10.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಕೆ.ಆರ್.ಎಸ್. ವಕೀಲರಿಂದಃ**

12. ನಾನು ಈ ಹಿಂದೆ ಸಲ್ಲಿಸಿದ್ದ ಸಿ.ಸಿ. 2183/2022 ರ ಚೆಕ್ ಬೌನ್ಸ್ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ನಾನು ಸಿ.ಸಿ. 2183/2022 ರ ಪ್ರಕರಣದಲ್ಲಿ ನಮೂದಿಸಿದ್ದ ಪ್ರತಿವಾದಿಯ ವಿಳಾಸ ಮತ್ತು ಈ ದಾವೆಯಲ್ಲಿ ನಮೂದಿಸಿರುವ ಪ್ರತಿವಾದಿಯ ವಿಳಾಸ ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ. ಅಪ್ಪಾಜೀಗೌಡರಿಗೆ ಎಷ್ಟು ಜನ ಸಹೋದರ-ಸಹೋದರಿಯರು ಇದ್ದಾರೆ ಎಂದು ನನಗೆ ಗೊತ್ತಿಲ್ಲ.

13. ಪ್ರತಿವಾದಿಯರ ಮನೆಯ ಪಕ್ಕದಲ್ಲಿ ಅಪ್ಪಾಜೀಗೌಡರ ಅಣ್ಣನ ಮನೆ ಇದ್ದು, ಸದರಿ ಅಣ್ಣನ ಹೆಸರು ನನಗೆ ಗೊತ್ತಿಲ್ಲ. ನನ್ನ ಅಜ್ಜಿಯಾದ ನಿಂಗಮ್ಮರವರು ಕುಳ್ಳೇಗೌಡರ ಬೀದಿಯಲ್ಲಿ ವಾಸವಿದ್ದಾರೆ ಎಂದು ಸಾಕ್ಷಿಯು ಮೊದಲು ನುಡಿದಿದ್ದು, ನಂತರದಲ್ಲಿ ನನ್ನ ಅಜ್ಜಿಯಾದ ನಿಂಗಮ್ಮರವರು ಪಟೇಲ್ ರಾಜರ ಬೀದಿಯಲ್ಲಿ ವಾಸವಿದ್ದಾರೆ ಹಾಗೂ ನನ್ನ ದೊಡ್ಡಮ್ಮನಾದ ಸುಂದರಮ್ಮರವರು ಕುಳ್ಳೇಗೌಡರ ಬೀದಿಯಲ್ಲಿ ವಾಸವಿದ್ದಾರೆ ಎಂದು ನುಡಿದಿರುತ್ತಾರೆ. ನಾನು ಅಪ್ಪಾಜೀಗೌಡರಿಗೆ ಹಣವನ್ನು ನನ್ನ ಅಜ್ಜಿಯಾದ ನಿಂಗಮ್ಮ ಮತ್ತು ನನ್ನ ದೊಡ್ಡಮ್ಮನಾದ ಸುಂದರಮ್ಮ ಹಾಗೂ ನನ್ನ ತಂದೆಯ ಮಧ್ಯಸ್ತಿಕೆಯಲ್ಲಿ ನೀಡಿರುವುದಿಲ್ಲ.

14. ನಮ್ಮ ಮತ್ತು ಅಪ್ಪಾಜಿಗೌಡರ ಕುಟುಂಬದ ಮಧ್ಯೆ ಒಬ್ಬರ ಮನೆಗೆ ಇನ್ನೊಬ್ಬರು ಹೋಗುವ ಸಂಪಧ್ರಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪ್ಪಾಜೀಗೌಡರು ನನ್ನಿಂದ ಸಾಲ ಪಡೆದ ಬಗ್ಗೆ ಪ್ರತಿವಾದಿಯರಿಗೆ ತಿಳಿಸಿರುತ್ತೇನೆ. ದಿನಾಂಕ 05.09.2022 ರಂದು ನಾನು ಅಪ್ಪಾಜಿಗೌಡರಿಗೆ ಸಾಲವನ್ನು ಕೊಟ್ಟಿದ್ದು, ಸದರಿ ದಿನಾಂಕದ ಒಂದು ವಾರದ ಪೂರ್ವದಲ್ಲಿ ನಾನು ಪ್ರತಿವಾದಿಯರೊಂದಿಗೆ ಅಪ್ಪಾಜಿಗೌಡರಿಗೆ ಸಾಲ ಕೊಡುವ ವಿಷಯವನ್ನು ಅವರ ಮನೆಯ ಬಳಿ ಹೋಗಿ ತಿಳಿಸಿದೆ. ಅಪ್ಪಾಜಿಗೌಡರಿಗೆ ಸಾಲ ಕೊಡುವ ವಿಷಯವನ್ನು ನಾನು ಪ್ರತಿವಾದಿಯರೊಂದಿಗೆ ಪ್ರಸ್ತಾಪಿಸಿದ್ದ ವಿಷಯವನ್ನು

ಸಿ.ಸಿ. 2183/2022 ರ ಪ್ರಕರಣದಲ್ಲಿ ಮತ್ತು ಈ ದಾವೆಯಲ್ಲಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ವಿಷಯವನ್ನು ನೀವು ಇದೇ ಮೊದಲ ಬಾರಿಗೆ ಹೇಳುತ್ತಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಈ ಹಿಂದೆ ನನ್ನನ್ನು ಸದರಿ ವಿಷಯ ಬಗ್ಗೆ ಯಾರು ಸಹ ನನ್ನಲ್ಲಿ ಕೇಳಿರಲಿಲ್ಲ ಆದ್ದರಿಂದ ನಾನು ಸದರಿ ವಿಷಯವನ್ನು ನಾನು ಈ ಹಿಂದೆ ಹೇಳಿರಲಿಲ್ಲ ಎಂದು ನುಡಿದಿರುತ್ತಾರೆ.

15. ನನ್ನ ಮತ್ತು ಅಪ್ಪಾಜಿಗೌಡರ ಕುಟುಂಬದ ಮಧ್ಯೆ ಯಾವುದೇ ನೆಂಟಸ್ತಿಕೆ ಇಲ್ಲ ಎಂದರೆ ಸರಿಯಲ್ಲ. ನಿಪಿ.1 ಚೆಕ್ಕಿನ ದಿನಾಂಕವನ್ನು ಯಾರು ಬರೆದಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅಪ್ಪಾಜಿಗೌಡರು ಬರುವಾಗ ನಿಪಿ.1 ರ ಚೆಕ್ಕನ್ನು ಬರೆದುಕೊಂಡು ತಂದಿದ್ದರು ಎಂದು ನುಡಿದಿರುತ್ತಾರೆ. ನಿಪಿ.1 ರಲ್ಲಿ ವಿಶಾಲ ಎನ್ನುವ ಹೆಸರನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಮೊತ್ತವನ್ನು ಸಹ ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ.

16. ನನ್ನ ಗಂಡನ ಹೆಸರು ಮಂಜುನಾಥ. ನಿಪಿ.6 ಮತ್ತು 7 ರ ದಾಖಲೆಗಳ ಪ್ರಕಾರ ನನ್ನ ಗಂಡನ ಹೆಸರಿಗೆ 4 ಗುಂಟೆ ಮತ್ತು 31 ಗುಂಟೆ ಜಮೀನುಗಳಿವೆ ಎಂದರೆ ಸರಿ. ನಿಪಿ.8 ಮತ್ತು 9 ರ ಆಸ್ತಿಗಳ ಮೇಲೆ ನನ್ನ ಅತ್ತೆಯಾದ ರಾಜಮ್ಮರವರು ಸಾಲ ಪಡೆದಿರುವುದಿಲ್ಲ ಎಂದರೆ ಸರಿ. ನಿಪಿ.8 ಮತ್ತು 9 ರ ಆಸ್ತಿಗಳಿಂದ ಬಂದ ಆದಾಯವನ್ನು ನನ್ನ ಅತ್ತೆ ಅವರ ಹೆಣ್ಣು ಮಕ್ಕಳಿಗೆ ಕೊಡುತ್ತಾರೆ ಎಂದರೆ ಸರಿಯಲ್ಲ. ನನ್ನ ನಾದಿನಿಯಾದ ರಾಣಿ ನಮ್ಮ ಊರಿನಲ್ಲಿಯೇ ವಾಸವಿದ್ದಾರೆ ಎಂದರೆ ಸರಿ. ನಿಪಿ.8 ಮತ್ತು 9 ರ ಆಸ್ತಿಗಳಿಂದ ಬಂದ ಆದಾಯವನ್ನು ನನ್ನ ಅತ್ತೆ ನನ್ನ ನಾದಿಯವರಿಗೆ ಕೊಟ್ಟು ರಾಣಿರವರ ಜೊತೆ ವಾಸವಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವನ ಮರಣ ಪರಿಹಾರ ಧನವಾದ 2 ಲಕ್ಷ ರೂಪಾಯಿ ಸಹ ನನ್ನ ಅತ್ತೆಯವರ ಆಸ್ತಿ ಎಂದರೆ ಸರಿಯಲ್ಲ.

17. ನನಗೆ ಇಬ್ಬರು ಹೆಣ್ಣು ಮಕ್ಕಳು. ನನ್ನ ಹಿರಿಯ ಮಗಳನ್ನು ವಿವಾಹ ಮಾಡಿಕೊಟ್ಟಿರುವುದಿಲ್ಲ. ಅಪ್ಪಾಜಿಗೌಡರಿಗೆ ಮಧ್ಯಪಾನದ ಚಟವಿತ್ತು ಎಂದರೆ ಸರಿಯಲ್ಲ. ನಟರಾಜು ಎನ್ನುವವರು ನಟರಾಜ ವೈನ್ಸ್ ನ ಮಾಲೀಕರಾಗಿರುತ್ತಾರೆ. ಮಿಲ್ಲನ್ನು ಮುಸ್ಲಿಂ ಸಮುದಾಯದವರು ನಡೆಸುತ್ತಿದ್ದಾರೆ. ಅಂದಾಜು 20 ವರ್ಷಗಳಿಂದ ಸದರಿ ಮಿಲ್ಲನ್ನು ಮುಸ್ಲಿಂ ಸಮುದಾಯದವರು ನಡೆಸುತ್ತಿದ್ದಾರೆ. ಸುಮಾರು 10 ವರ್ಷಗಳಿಂದ ನಟರಾಜು ಎನ್ನುವವರು ನಟರಾಜ ವೈನ್ಸ್ ನ್ನು ನಡೆಸುತ್ತಿದ್ದಾರೆ. ಮಿಲ್ಲಿನಿಂದ ಮತ್ತು ನಟರಾಜ ವೈನ್ಸ್ ಹಾಗೂ ಮಳಿಗೆಗಳಿಂದ ಬರುತ್ತಿದ್ದ

ಆದಾಯವನ್ನು ಅಪ್ಪಾಜಿಗೌಡರೇ ಪಡೆಯುತ್ತಿದ್ದರು. ಮಿಲ್ಲು, ವೈನ್ಸ್ ಶಾಪ್ ಸೇರಿದಂತೆ ಅಪ್ಪಾಜಿಗೌಡರಿಗೆ ತೋಟ ಮತ್ತು ಆರ್.ಸಿ.ಸಿ. ಮನೆ ಇದೆ ಎಂದರೆ ಸರಿ. ಸುಮಾರು 20 ವರ್ಷಗಳ ಹಿಂದೆ ಅಪ್ಪಾಜಿಗೌಡರು ತಮ್ಮ ಮಕ್ಕಳಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಅಪ್ಪಾಜಿಗೌಡರಿಗೆ ಯಾವುದೇ ಆರ್ಥಿಕ ಕಷ್ಟ ಮತ್ತು ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ಗಂಡ ಅಪ್ಪಾಜಿಗೌಡರ ಬಳಿ ಕೆಲಸಕ್ಕೆ ಹೋಗುತ್ತಿದ್ದು, ಅಪ್ಪಾಜಿಗೌಡರಿಗೆ ಸಾರಾಯಿ ಕುಡಿಯುವ ಚಟವಿದ್ದ ಕಾರಣ, ಸಾರಾಯಿ ಕುಡಿದ ಅಮಲಿನ ದುರುಪಯೋಗಪಡಿಸಿಕೊಂಡು ನನ್ನ ಗಂಡ ಅಪ್ಪಾಜಿಗೌಡರ ನಿಪಿ.1 ರ ಚೆಕ್ಕನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

18. ನನ್ನ ಮತ್ತು ಅಪ್ಪಾಜಿಗೌಡರ ಮಧ್ಯ ಯಾವುದೇ ಹಣಕಾಸಿನ ವ್ಯವಹಾರ ನಡೆಯದಿದ್ದರು ಸಹ ಅಪ್ಪಾಜಿಗೌಡರ ಸಾರಾಯಿ ಕುಡಿದ ಅಮಲಿನ ದುರುಪಯೋಗಪಡಿಸಿಕೊಂಡು ನಿಪಿ.1 ರ ಚೆಕ್ಕನ್ನು ಪಡೆದು ಅದರ ಆಧಾರದ ಮೇಲೆ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಅಪ್ಪಾಜಿಗೌಡರ ಚೆಕ್ಕಿನ ಮೇಲೆ ನನ್ನ ಗಂಡ ದಾವೆಯನ್ನು ಹೂಡಿದರೆ ನನ್ನ ಗಂಡನಿಗೆ ತೊಂದರೆ ಆಗುತ್ತದೆ ಎನ್ನುವ ಕಾರಣದಿಂದ ನನ್ನ ಮೂಲಕ ಈ ಸುಳ್ಳು ದಾವೆಯನ್ನು ಹೂಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**